■ ಹನಿ

# ಕೊಲವೆರಿ ವೈ?

'ವೈ ದಿಸ್ ಕೊಲವೆರಿ' ಹಾಡೇನೋ ವಿಶ್ವಪ್ರಸಿದ್ಧವಾಗಿರಬಹುದು; ಆದರೆ ಅದರಿಂದಾಗಿ ಧನುಷ್ ಕೂಡಾ ವಿಶ್ವಪ್ರಸಿದ್ಧ ಆಗಿದ್ದಾನೆ ಎನ್ನುವುದು ಸುಳ್ಳು! ಹಾಗೆಂದು ಬೆಂಗಳೂರಿನ ರಸಿಕರೇ ತೀರ್ಪು ಕೊಟ್ಟಿದ್ದಾರೆ. ಕಳೆದ ವಾರ ಬೆಂಗಳೂರಿನ ಅರಮನೆ ಮೈದಾನದಲ್ಲಿ ಈ ಹಾಡನ್ನು ಹಾಡಲು ತಮಿಳು ಚಿತ್ರನಟ, ಗಾಯಕ ಧನುಷ್ ಬಂದಾಗ ನೆರೆದಿದ್ದವರು 500-600 ಜನ ಮಾತ್ರ! ಕೊಲವೆರಿ ಹಾಡನ್ನು ಲಕ್ಷಾಂತರ ಜನ ಇಂಟರ್‌ನೆಟ್‌ನಿಂದ ಡೌನ್‌ಲೋಡ್ ಮಾಡಿದ್ದಾರೆಂದು ಬೀಗುತ್ತಿದ್ದ ಸಂಘಟಕರು ಜನರ ಬರಗಾಲ ನೋಡಿ ದಂಗಾದರಂತೆ. 'ಅವತ್ತೇ ಬೆಂಗಳೂರಿನಲ್ಲಿ ಸೆಲೆಬ್ರಿಟಿ ಕ್ರಿಕೆಟ್ ಮ್ಯಾಚ್ ಇತ್ತು. ಅದಕ್ಕೇ ಜನ ಕಡಿಮೆ' ಎಂದು ಸಮಾಧಾನ ಪಟ್ಟುಕೊಂಡರಂತೆ. ಆದರೆ ಸಮಾರಂಭದ ವೇದಿಕೆಗೆ ರಾತ್ರಿ ಏಳಕ್ಕೆ ಬರಬೇಕಾದ ಧನುಷ್ ಹತ್ತು ಗಂಟೆಗೆ ಬಂದದ್ದು ಹಾಗೂ ಹತ್ತೇ ನಿಮಿಷ ವೇದಿಕೆಯಲ್ಲಿ ನಿಂತದ್ದು ಸಂಘಟಕರಿಗೆ ಸಿಟ್ಟು ತರಿಸಿದೆಯಂತೆ. '17 ಲಕ್ಷ ಕೊಡುತ್ತೇನೆಂದವರು 3 ಲಕ್ಷ ಮಾತ್ರ ಕೊಟ್ಟರೆ ಇನ್ನೇನು ಮಾಡುವುದು?' ಎನ್ನುವುದು ಧನುಷ್ ಅಭಿಮಾನಿಗಳ ಮರುಪ್ರಶ್ನೆ! ವಿಷಯ ಏನೇ ಇರಲಿ, ಧನುಷ್ ಬೆಂಗಳೂರು ಭೇಟಿ ಮಾತ್ರ ಠುಸ್ಸಾದದ್ದು ಸುಳ್ಳಲ್ಲ.



ವೆಂಕಟೇಶ ಪ್ರಭು ಕಸ್ತೂರಿ ರಾಜಾ ಎಂದರೆ ಪ್ರೇಕ್ಷಕರು ಯಾರೀತ.. ಎಂದು ಕೇಳಬಹುದು. ಧನುಷ್‌ನ ಮೂಲ ಹೆಸರದು. (ಬರ್ತ್‌ಡೇ 28-7-83) ಇನ್ನೂ 29ರ ಹರೆಯದ ಧನುಷ್ ನಟನಾಗಿ ಪಡೆದಿರುವ ಯಶಸ್ಸು ಮಾತ್ರ ಅಪರೂಪದ್ದು. ಚಿತ್ರಸಾಹಿತಿಯಾಗಿ, ಪಾರ್ಟ್‌ಟೈಂ ಗಾಯಕನಾಗಿ ಇದ್ದ ಧನುಷ್ 'ಕೊಲವೆರಿ' ಹಾಡಿದ ಬಳಿಕ ಪ್ರತೀ ಸಿನಿಮಾದಲ್ಲೂ ಹಾಡುವ ಒತ್ತಡ ಉಂಟಾಗಿದೆ. ಅಪ್ಪ ಕಸ್ತೂರಿ ರಾಜಾ ನಿರ್ದೇಶನದಲ್ಲಿ ಮೊದಲ ಸಿನಿಮಾದಲ್ಲಿ (2001) ನಟಿಸಿದರೂ, ಬಳಿಕ ಸೋದರ ನಿರ್ದೇಶಿಸಿದ 'ಕಾದಲ್ ಕೊಂಡೇನ್'ನಲ್ಲಿ ನಿರ್ವಹಿಸಿದ ಮಾನಸಿಕ ಅಸ್ವಸ್ಥನ ಪಾತ್ರ ದೊಡ್ಡ ಹೆಸರು ತಂದುಕೊಟ್ಟಿತು. ಹಾಗೆಂದು ಆರಂಭದಲ್ಲಿ ಕಂಡ ಯಶಸ್ಸು ಮತ್ತೆ ಕೈಕೊಟ್ಟಿದ್ದೂ ನಿಜ. 2006ರ ಬಳಿಕ ಧನುಷ್‌ಗೆ ಅದೃಷ್ಟ ಒದ್ದು-ಕೊಂಡು ಬಂತು. ಮುಟ್ಟಿದ್ದೆಲ್ಲ ಚಿನ್ನ! 'ಆಡುಕಳಂ' ಚಿತ್ರದಲ್ಲಿ ನಟನೆಗೆ ರಾಷ್ಟ್ರೀಯ ಪ್ರಶಸ್ತಿಯೂ ಲಭಿಸಿತು. ಐಶ್ವರ್ಯಳ ಕೈಹಿಡಿದು ಮೆಗಾಸ್ಟಾರ್ ರಜನಿಕಾಂತ್ ಅಳಿಯನಾದ ಮೇಲೆ ಧನುಷ್ ಜನಪ್ರಿಯತೆ ಅಟ್ಟಕ್ಕೇರಿದೆ. ಹಾಗೆಂದು ಚಿತ್ರರಸಿಕರು ಎಲ್ಲ ಕಡೆಯೂ ಮುಗಿ ಬೀಳುತ್ತಾರೆಂದರೆ ಸುಳ್ಳೇ. ಸದ್ಯಕ್ಕೆ ಬಾಲಿವುಡ್ ಪ್ರವೇಶಿಸಿರುವ ಧನುಷ್, ಅಲ್ಲಿ ತನ್ನ ಪೀಚಲು ದೇಹದಿಂದ ಏನೆಲ್ಲಾ ಕರಾಮತ್ತು-ಗಳನ್ನು ಮಾಡುತ್ತಾನೋ ಕಾದು ನೋಡಬೇಕು.



# ಅಡೆಲ್ ಎಂಬ ಅಚ್ಚರಿ!

ಒಂದಲ್ಲ, ಎರಡಲ್ಲ.. ಬರೋಬ್ಬರಿ ಆರು ಗ್ರಾಮ್ಮಿ ಪ್ರಶಸ್ತಿಗಳನ್ನು ಈ ಸಲ (2012) ಬಾಚಿಕೊಂಡಿರುವ ಈ ಬ್ರಿಟಿಶ್ ಗಾಯಕಿ ಅಡೆಲ್, ಜಾಗತಿಕ ಸಂಗೀತ ಲೋಕವನ್ನೇ ಬೆಚ್ಚಿ ಬೀಳಿಸಿದ್ದಾಳೆ. ಅತ್ಯುತ್ತಮ ಆಲ್ಬಂ, ಅತ್ಯುತ್ತಮ ರೆಕಾರ್ಡಿಂಗ್, ವರ್ಷದ ಅತ್ಯುತ್ತಮ ಹಾಡು ಮುಂತಾಗಿ ಒಟ್ಟು ಆರು ಗ್ರಾಮ್ಮಿಗಳೆಂದರೆ ಸಣ್ಣ ಸಾಧನೆ-ಯೇನಲ್ಲ. 1964ರಲ್ಲಿ ಬೀಟಲ್ ಹೀಗೆ ಪ್ರಶಸ್ತಿ ಬಾಚಿದ್ದು ಬಿಟ್ಟರೆ ಆ ಬಳಿಕ ಯಾರೂ ಇಷ್ಟು ಸುದ್ದಿ ಮಾಡಿಲ್ಲ. ಸದ್ಯಕ್ಕಂತೂ ಈಕೆ ಬ್ರಿಟನ್ ಮತ್ತು ಅಮೆರಿಕದ ಹಾಟ್ ಫೇವರೆಟ್ ಗಾಯಕಿ.

ಅಡೆಲ್ ಲಾರೀ ಬ್ಲೂ ಅಡ್ಕಿನ್ ಎಂಬ ಉದ್ದನೆಯ ಹೆಸರುಳ್ಳ ಈಕೆಯ ತಾಯಿ ಸಿಂಗಲ್ ಪೇರೆಂಟ್. ಎಳೆಹರೆಯದ ತಾಯಿಯ ಮಡಿಲಲ್ಲಿ ಬೆಳೆದ ಅಡೆಲ್ ಚಿಕ್ಕಂದಿನಿಂದಲೇ ಹಠವಾದಿ. 2006ರಲ್ಲಿ ಹಾಡಲು ಶುರು ಮಾಡಿ, 2008ರಲ್ಲಿ ಬಂದ ಈಕೆಯ ಮೊದಲ ಆಲ್ಬಂ ಹೆಸರು- 19. ಈಗ 2011ರ ಕೊನೆಯಲ್ಲಿ ಬಂದ ಎರಡನೆಯ ಆಲ್ಬಂ ಹೆಸರು -21. ಅಮೆರಿಕವೊಂದರಲ್ಲೇ ಈ ಆಲ್ಬಂನ 58 ಲಕ್ಷ ಪ್ರತಿಗಳು ಮಾರಾಟವಾಯಿತು! ವಿಶ್ವಾದ್ಯಂತ ಒಟ್ಟು 1.7 ಕೋಟಿ ಪ್ರತಿಗಳು ಮಾರಾಟವಾಗಿ ಈಕೆ ಗಿನ್ನೆಸ್ ದಾಖಲೆಯ ಪುಟಗಳನ್ನೂ ಸೇರಿದಳು. ಬ್ರಿಟನ್‌ನಲ್ಲಿ ವರ್ಷವೊಂದಕ್ಕೆ 30 ಲಕ್ಷ ಆಲ್ಬಂ ಪ್ರತಿಗಳನ್ನು ಮಾರಾಟ ಮಾಡಿದ ಮೊದಲ ಗಾಯಕಿ ಈಕೆ. 2009ರಲ್ಲೂ ಈಕೆ ಎರಡು ಗ್ರಾಮ್ಮಿಗಳನ್ನು ಗೆದ್ದಿದ್ದಳು. ಆದರೆ ಈ ಸಲದ್ದು ಭರ್ಜರಿ ಸ್ವೀಪ್.

ಕಳೆದ ವರ್ಷ ಗಂಟಲಿನ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಬಳಿಕ ಕುಡಿತ, ಸಿಗರೇಟ್ ಬಿಟ್ಟಿರುವ ಈ ಮಾದಕ ಕಂಠದ ಚೆಲುವೆ (ಬರ್ತ್‌ಡೇ 5-5-1988) 24ರ ಹರೆಯದಲ್ಲೇ ಏರಿದ ಎತ್ತರ ಗಮನಾರ್ಹ. 'ಇನ್ನು ಐದು ವರ್ಷ ನೀನು ಹಾಡಲ್ಲವಂತೆ ಹೌದಾ?' ಎಂದು ಮಾಧ್ಯಮದವರು ಕೇಳಿದಾಗ, 'ಅಯ್ಯೊ.. ಈ ಪ್ರಶಸ್ತಿ ತೆಗೆದುಕೊಂಡ ಬಳಿಕ ನೇರ ರೆಕಾರ್ಡಿಂಗ್ ಸ್ಟುಡಿಯೋಗೇ ಹೋಗಬೇಕಿದೆ' ಎಂದು ನಕ್ಕವಳು ಅಡೆಲ್! ಸದ್ಯಕ್ಕಂತೂ ಈಕೆಯ ಮಾರುಕಟ್ಟೆಯನ್ನು ಮುಟ್ಟುವವರಿಲ್ಲ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65